**ಒ.ಎಸ್. ನಂ.311/2014** **ಪಿ. ಡಬ್ಲ್ಯೂ - 1**

ದಿನಾಂಕಃ **13.03.2024** ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಮಾಡಿಸಲಾಯಿತು.

**ಮುಂದುವರೆದ ಪಾಟೀಸವಾಲು ಃ ಪ್ರತಿವಾದಿ ಪರ, ಶ್ರೀ ಸಿ ಎನ್ ಎಂ ವಕೀಲರಿಂದ,**

ನಾನು ನಮ್ಮ ತಂದೆಯವರಿಂದ ದಾವಾ ಸ್ವತ್ತಿನ ಕುರಿತು ಆಧಾರ ಪತ್ರ ಮಾಡಿಕೊಂಡಿದ್ದೇನೆಂದರೆ ಸರಿಯಲ್ಲ, ಈ ರೀತಿ ದಿಃ31.03.2015 ರಂದು ಆಧಾರ ಪತ್ರ ಬರೆಸಿಕೊಂಡಿದ್ದರೂ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಸದರಿ ಪತ್ರದಂತೆ ನಾನು ಯಾವುದೇ ಹಣ ನೀಡದೇ ಇದ್ದರೂ 5 ಲಕ್ಷ ಹಣ ನೀಡಿರುವುದಾಗಿ ನಮೂದು ಮಾಡಲಾಗಿದೆ ಎಂದರೆ ಸರಿಯಲ್ಲ. ದಿಃ28.06.2017 ರಂದು ಸದರಿ ಹಣ ಮರುಪಾವತಿ ಮಾಡಿದ್ದು ಆಧಾರ ಬಿಡುಗಡೆ ಮಾಡಲಾಗಿದೆ ಎಂದರೆ ಸರಿ. ನನ್ನ ಗಂಡನ ತಂಗಿಯನ್ನು 2 ನೇ ಪ್ರತಿವಾದಿಗೆ ಕೊಟ್ಟು ವಿವಾಹ ಮಾಡಿದ್ದಾರೆಂದರೆ ಸರಿ. ನಮ್ಮ ಮತ್ತು 2 ನೇ ಪ್ರತಿವಾದಿಯ ನಡುವೆ ಭಿನ್ನಾಭಿಪ್ರಾಯ ಇದೆ ಎಂದರೆ ಸರಿ. ನನ್ನ ಸಹೋದರರು ಈಗ ಸುಮಾರು ವರ್ಷಗಳ ಹಿಂದೆಯೇ ಅದರಂತೆ ಪ್ರತ್ಯೇಕ ಸ್ವಾದೀನ ಹೊಂದಿದ್ದಾರೆಂದರೆ ಸರಿಯಲ್ಲ. ದಾವಾಸ್ತಿ ನಮ್ಮ ತಂದೆಯ ಸ್ವಯರ್ಜಿತ ಆಸ್ತಿಯಾಗಿದ್ದು ಅವರು ನನ್ನ ಸಹೋದರರು ಮತ್ತು ಅವರ ಮಕ್ಕಳ ಪರವಾಗಿ ಮರಣ ಶಾಸನ ಪತ್ರ ಮಾಡಿಕೊಟ್ಟಿದ್ದಾರೆಂದರೆ ಸರಿಯಲ್ಲ. ನಮ್ಮ ತಂದೆ ಮೃತ ಪಟ್ಟ ನಂತರ ಮರಣಶಾಸನ ಪತ್ರದ ಆಧಾರದ ಮೇಲೆ ಖಾತೆ ವರ್ಗಾವಣೆ ಆಗಿದ್ದು ಅದರಂತೆ ಪ್ರತಿವಾದಿಯರು ಸ್ವಾದೀನ ಹೊಂದಿದ್ದಾರೆಂದರೆ ಸರಿಯಲ್ಲ, ನನ್ನ ನಾದಿನಿಯೊಂದಿಗೆ ಮನಸ್ತಾಪ ಇರುವ ಕಾರಣ ಅವರಿಗೆ ತೊಂದರೆ ಕೊಡುವ ಕಾರಣ ಸುಳ್ಳು ದಾವೆ ಸಲ್ಲಿಸಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆ ಃ ಇಲ್ಲ.**

(ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಅನುಸಾರವಾಗಿ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

**ಸಾ ಓ ಹೇ ಕೇ ಸ ಅದೆ.**

**ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾ.**
**ದಂಡಾಧಿಕಾರಿಗಳು, ಕೃಷ್ಣರಾಜಪೇಟೆ.**